


**ಮಾಹಿತಿಪೂರ್ಣ**
'ಈ ಕಾರಿಗೆ ಡ್ರೈವರ್ ಬೇಕಿಲ್ಲ', ಜಯಸಿಂಹ ಆರ್. ಅವರ ಮುಖಪುಟ ಲೇಖನ (ಸುಧಾ, ಜೂನ್ 21) ಮಾಹಿತಿ ಪೂರ್ಣವಾಗಿದೆ. ಚಾಲಕರಿದ್ದೇ ಅವರು ಮಾಡುವ ಎಡವಟ್ಟುಗಳಿಂದ ಇಷ್ಟೊಂದು ಅಪಘಾತಗಳು ನಡೆಯುತ್ತಿವೆ. ರಸ್ತೆ ನಿಯಮವನ್ನು ಪಾಲಿಸದೇ ವಾಹನ ಚಲಾಯಿಸುವುದರಿಂದ ಈ ಕಾರುಗಳು ನಮಗೆ ಅನುಕೂಲಕ್ಕಿಂತ ಅನಾನುಕೂಲವನ್ನೇ ಮಾಡುವ ಸಂಭವ ಜಾಸ್ತಿ.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಜನಾರ್ದನ ಹಂದೆ ಮಂಗಳೂರು

**ಕೂರುವ ಮನಸ್ಸಾಗಿದೆ**
ಲೇಖನ ಕುತೂಹಲ ಮೂಡಿಸಿದೆ. ಯಾರಾದರೂ ಕೊಂಡರೆ, ಸ್ವಲ್ಪ ಸಮಯ ಕೂರುವ ಮನಸ್ಸಾಗಿದೆ.

— ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

**ಟೆಸ್ಲಾ ಪದ ಟೆಲ್ಸಾ ಎಂದಾಗಿದೆ**
ಸ್ವಯಂ ಚಾಲಿತ ಕಾರುಗಳು ಮಧ್ಯಮ, ಸಾಮಾನ್ಯ ವರ್ಗದ ಜನರಿಗೆ ಎಟುಕಲಾರವು. ಅಂತೆಯೇ ಟೆಸ್ಲಾ ಎಂಬ ಪದ ಲೇಖನದಲ್ಲಿ ಹಲವಾರು ಕಡೆ ಟೆಲ್ಸಾ ಎಂದು ತಪ್ಪಾಗಿ ಮುದ್ರಿತವಾಗಿದೆ.

—ಮಹಾವೀರ ಕಾಸರ, ಶಿವಮೊಗ್ಗ

**ಸಂಕಟವಾಯಿತು**
'ನಿಮ್ಮೊಡನೆ'ಯಲ್ಲಿ 'ವಿದ್ಯಾರ್ಥಿಗಳಿಗೆ ಹಿಂಸೆ ಸರಿಯಲ್ಲ' (ಬಿ.ಎಂ. ಹನೀಫ್) ಬರಹ ಓದಿ ಈ ಕಾಲದಲ್ಲೂ ಶಾಲೆಯಲ್ಲಿ ಮಕ್ಕಳು ಹಿಂಸೆ ಅನುಭವಿಸುತ್ತಿರುವುದು ತಿಳಿದು ನೋವು, ಸಂಕಟವಾಯಿತು.

—ಸೀತಾ ಕೇಶವ ಸಿಡ್ನಿ

**ಸೂರ್ಯ ನಮಸ್ಕಾರ**
'ದೈಹಿಕ ಕ್ಷಮತೆಗೆ ಸೂರ್ಯ ನಮಸ್ಕಾರ' (ಹೇಮಂತ ಕುಮಾರ ದೇಸಾಯಿ) ಲೇಖನ ಸಮಯೋಚಿತ.

—ಬಿ.ಕೆ. ಶ್ರೀನಿವಾಸಮೂರ್ತಿ, ಬೆಂಗಳೂರು, ರವೀಂದ್ರನಾಥ ಶಿ. ಯಡಳ್ಳಿ, ಬೀಳಗಿ

**ಸಕಾಲಿಕ**
'ಫುಟ್‌ಬಾಲ್ ಪುಳಕಕ್ಕೆ ಕಾದು ನಿಂತಿದೆ ಲೋಕ' (ಪ್ರಮೋದ ಜಿ.ಕೆ.) ಫಿಫಾ (FIFA) ವಿಶ್ವಕಪ್ ಫುಟ್ ಬಾಲ್ ಆರಂಭವಾಗುವ ಸಮಯಕ್ಕೆ ಸರಿಯಾಗಿ ಲೇಖನ ಪ್ರಕಟವಾಗಿದ್ದು ಸಕಾಲಿಕವಾಗಿದೆ.

—ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

**ಅಜ್ಜಿಮನೆ ಆರೈಕೆ**
ಸೌಂದರ್ಯ ಪುಟದಲ್ಲಿ 'ಅಜ್ಜಿಮನೆ ಸೌಂದರ್ಯದ ಗೂಡು' (ಉಮಾ ಅನಂತ್) ಲೇಖನ ಚೆನ್ನಾಗಿದೆ. ಮೂವರು ಮಾಗಿದ ಅನುಭವದ ಅಜ್ಜಿಯರನ್ನು ಲೇಖನದಲ್ಲಿ ನೋಡಿದಾಗ ಚಿಕ್ಕಂದಿನಲ್ಲಿ ನನ್ನಜ್ಜಿ ಮನೆಯಲ್ಲಿ ಪ್ರೀತಿಯ ಆರೈಕೆಯ ಮಹಾಪೂರದ ನೆನಪುಕ್ಕಿ ಬಂತು. ಕಪಟವನ್ನೇ ಕಾಣದ ಆ ಪ್ರೀತಿಯ ಆರೋಗ್ಯ ಸಿಂಚನವನ್ನು ಮರೆಯಲಾರೆ.

—ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

**ವಿಶ್ಲೇಷಣಾತ್ಮಕ ಲೇಖನ**
'ಸಾಲ ಮನ್ನಾ ಸರಿಯೇ?' (ಧರ್ಮಾನಂದ ಶಿರ್ವ) ಪ್ರಸ್ತುತ ಚರ್ಚೆಗೆ ಗ್ರಾಸವಾಗಿರುವ ವಿಚಾರದ ಮೇಲೆ ಬೆಳಕು ಚೆಲ್ಲಿದೆ.

—ಸುಂದರ್ ಬೆಂಗಳೂರು, ಮುಕುಂದ ಹೆರಕಲ್ಲ ಕಲಬುರಗಿ, ರಾಜಶೇಖರ ಹಾದಿಮನಿ ಧಾರವಾಡ, ಮಂಜುನಾಥ ಎನ್. ಬೆಂಗಳೂರು, ರಾಜೀವ್ ಎನ್. ಮಾಗಲ್

**ಸವಿವರ ಮಾಹಿತಿ**
'ಸಿಡಿಲು ಬಡಿದೀತು ಎಚ್ಚರ!' (ಡಾ. ಕರವೀರ ಪ್ರಭು ಕ್ಯಾಲಕೊಂಡ) ಸಕಾಲಿಕ ಲೇಖನವಾಗಿದ್ದು ಪ್ರಸ್ತುತ ಮುಂಗಾರಿನ ಅಬ್ಬರದ ಆರ್ಭಟದಲ್ಲಿ ಸಂಭವಿಸುವ ಸಿಡಿಲಿನ ಬಗ್ಗೆ ಸವಿವರವಾದ ಮಾಹಿತಿ ಲಭ್ಯವಾಯಿತು.

—ವಿ. ಹೇಮಂತಕುಮಾರ ಬೆಂಗಳೂರು

**ತಪ್ಪುಗಳಿವೆ**
ಸಿಡಿಲು ಕುರಿತ ಲೇಖನದಲ್ಲಿ ತುಂಬ ತಪ್ಪುಗಳು ನುಸುಳಿವೆ.

—ಕೆ.ಎಸ್. ಶಂಕರಪ್ಪ ದೇವನಹಳ್ಳಿ

**ಅಚ್ಚರಿ, ಖುಷಿ ಆಯ್ತು**
'ವಂಡರ್ ಪುಟ'ದಲ್ಲಿ 'ಓ ಟೋರಿ ಗೇಟ್' (ಪ್ರಭಾ ಪಿ. ಶಾಸ್ತ್ರಿ) ಓದಿದಾಗ ಅಚ್ಚರಿ, ಖುಷಿ ಆಯ್ತು.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ

**ಕಥೆ, ಚಿತ್ರ ಎರಡೂ ಚೆನ್ನಾಗಿವೆ**
ಕಥೆ 'ಪೆರ್ನಾಲ್' (ಪಕ್ರುದ್ದೀನ್ ಇರುವೈಲ್) ಚೆನ್ನಾಗಿದೆ. ಕಲಾವಿದ ಈಶ್ವರ್ ಬಡಿಗೇರ ರಚಿಸಿದ ಚಿತ್ರ ಕಥೆಯ ಅಂತರಂಗಕ್ಕೆ ಕನ್ನಡಿ ಹಿಡಿದಂತಿದೆ.

—ಕೊಹಿಮ, ಬಸರಕೋಡು

**ಇಲಿ ಓಡಿಸಲು ಪರಿಹಾರ**
ಹಾಸ್ಯ 'ಇಲಿ ಬೇಟೆ' (ಎಸ್.ಜಿ. ಶಿವಶಂಕರ್) ತುಂಬ ತಮಾಷೆಯಾಗಿದೆ. ಇಲಿ ನಿಯಂತ್ರಿಸಲು ಪರಿಹಾರ ಸೂಚಿಸಿ ಎಂದು ಕೇಳಿದ್ದರು. ಇಗೋ ಅದಕ್ಕೆ ಪರಿಹಾರ:
* ಮೆಣಸು ಕಾಳನ್ನು ಜಜ್ಜಿ ಪುಡಿ ಮಾಡಿ ಇಲಿಗಳು ಓಡಾಡುವ ಕಡೆ ಚೆಲ್ಲಿ. ಆ ವಾಸನೆಗೆ ಇಲಿಗಳು ಬರುವುದಿಲ್ಲ. * ಬೆಳ್ಳುಳ್ಳಿಯನ್ನು ಜಜ್ಜಿ ನೀರಿನಲ್ಲಿ ಕಲಸಿ, ಇಲಿಗಳು ಬರುವ ಕಡೆ ಅಥವಾ ಬಿಲದ ಬಳಿ ಹಾಕಿ. ಓಡಿ ಹೋಗುವುದು. * ಅಮೋನಿಯಾ ಪುಡಿ ಅಥವಾ ಬೇಕಿಂಗ್ ಪೌಡರ್ ಚೆಲ್ಲಿ, ಓಡಿ ಹೋಗುವುದು. * ಲವಂಗದ ಪುಡಿ ಚೆಲ್ಲಿ, ಇಲಿ ಓಡಿ ಹೋಗುವುದು.

—ಎ.ಪಿ. ರಂಗನಾಥ್, ಮೈಸೂರು, ಪ್ರಾರ್ಥನಾ ಹೇಮಂತ ಕುಮಾರ ಬೆಂಗಳೂರು, ಕೆ.ವಿ. ರಾಜಲಕ್ಷ್ಮಿ ಬೆಂಗಳೂರು, ಪ.ಚಂದ್ರಕುಮಾರ ಗೌನಳ್ಳಿ, ಪುಷ್ಪಾ ಶ್ರೀರಾಮ್ ಬೆಂಗಳೂರು

**ರಂಜಾನ್ ಉಪವಾಸ**
'ರಂಜಾನ್ ಉಪವಾಸ' (ಡಾ.ವಿಜಯ ಕುಮಾರ್) ಲೇಖನ ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿದೆ.

—ನಾರಾಯಣಯಾಜಿ ಶಿರಾಲಿ

**ಪ್ರವಾಸ ಲೇಖನ**
ಪ್ರವಾಸ 'ನಾಮ್ಚಿಯಿಂದ ಡಾರ್ಜಿಲಿಂಗ್..' (ಸಂಪತ್ ಕುಮಾರ್ ಜೈನ್) ಲೇಖನ ಹಾಗೂ ಚಿತ್ರಗಳು ಚೇತೋಹಾರಿಯಾಗಿವೆ.

—ಎಸ್.ಚನ್ನಪ್ಪ ಮೈಸೂರು

**ಒಂದೇ ಲೇಖನ; ಎರಡು ಪತ್ರಿಕೆಗಳಲ್ಲಿ..**
ಜೂನ್ 7 ರ 'ಸುಧಾ' ಸಂಚಿಕೆಯಲ್ಲಿ ಪ್ರಕಟವಾದ ಆರೋಗ್ಯ ಲೇಖನ 'ಬಾವಲಿ ಜ್ವರ; ವಹಿಸೋಣ ಎಚ್ಚರ' (ಡಾ.ಮುರಲೀ ಮೋಹನ್ ಚೂಂತಾರು) ಅದೇ ವಾರದಲ್ಲಿ 'ಮಂಗಳ' ವಾರಪತ್ರಿಕೆಯಲ್ಲೂ ಪ್ರಕಟವಾಗಿದೆ. ಒಂದೇ ಲೇಖನವನ್ನು ಎರಡೆರಡು ಪತ್ರಿಕೆಗಳಿಗೆ ಕಳಿಸುವ ಲೇಖಕರ 'ಜಾಣತನ'ಕ್ಕೆ ಕಡಿವಾಣ ಹಾಕಬೇಕು.

—ಪಿ. ಶ್ರೀಕಾಂತ್ ರಾವ್ ಮಂಗಳೂರು

---

**ಜನ್ನಾ ಸನದಿ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ**
ಬೆಳಗಾವಿಯ ಬಿ.ಎ. ಸನದಿ ಸಾಂಸ್ಕೃತಿಕ ಪ್ರತಿಷ್ಠಾನವು ಪ್ರತಿವರ್ಷ ನೀಡುವ ರಾಜ್ಯಮಟ್ಟದ ಜನ್ನಾ ಸನದಿ ಸಾಹಿತ್ಯ ಪ್ರಶಸ್ತಿಗೆ ಕೃತಿಗಳನ್ನು ಆಹ್ವಾನಿಸಿದೆ. ಆಸಕ್ತರು ಕೃತಿಯ 4 ಪ್ರತಿಗಳನ್ನು– ಮೋಹನ ಕಳಸದ, 'ಶ್ರಮಶ್ರೀ' ಮನೆ ನಂ. 25, ಶಿಕ್ಷಕರ ಬಡಾವಣೆ, ಖಾಸಬಾಗ, ಬೆಳಗಾವಿ–3. 9845921947 ಜುಲೈ 5 ರೊಳಗೆ ಕಳಿಸಿ.

---

**ಚಡಗ ಸ್ಮಾರಕ ಕಾದಂಬರಿ ಪ್ರಶಸ್ತಿ ಸ್ಪರ್ಧೆ**
ಕುಂದಾಪುರ ಸಮೀಪ ಕೋಟೇಶ್ವರದ ಎಸ್.ಆರ್. ಎ.ಎಂ.ಎಚ್. ಪ್ರಕಾಶನ ಸಂಸ್ಥೆ ಕನ್ನಡದ ಹೆಸರಾಂತ ಕಾದಂಬರಿಕಾರ ಸಂಘಟಕ ದಿ.ಪಾಂಡೇಶ್ವರ ಸೂರ್ಯನಾರಾಯಣ ಚಡಗರ ನೆನಪಿನಲ್ಲಿ ಕೊಡುವ ವಾರ್ಷಿಕ ಶ್ರೇಷ್ಠ ಕಾದಂಬರಿ ಪ್ರಶಸ್ತಿಗಾಗಿ ಕಾದಂಬರಿಗಳನ್ನು ಲೇಖಕ/ಪ್ರಕಾಶಕರಿಂದ ಆಹ್ವಾನಿಸಲಾಗಿದೆ. ಆಗಸ್ಟ್ ಎರಡನೆಯ ವಾರದೊಳಗೆ ತಲುಪಬೇಕು. ವಿಳಾಸ : ಕೆ.ಶಾರದ ಭಟ್, ಸಂಚಾಲಕಿ, ಪ್ರಶಸ್ತಿ ಸಮಿತಿ, # 58, ಶಾಂತಾನಂದ ರೆಸಿಡೆನ್ಸಿ, ಮಿಶನ್ ಆಸ್ಪತ್ರೆ ರಸ್ತೆ, ಉಡುಪಿ 576 101; ಮೊಬೈಲ್ : 9449233462

